ಅದ್ವೈತ ವೇದಾಂತದ ದೃಷ್ಟಿಯಲ್ಲಿ ಮಹಾಲಿಂಗರಂಗನ ಅನುಭವಾಮೃತ, ಒಂದು ವಿವೇಚನೆ

ಪಿ.ಎಚ್‌ಡಿ. ಪದವಿಗಾಗಿ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಉದ್ದೇಶಿತ ಸಾರಲೇಖ

ಸಂಶೋಧಕರು

ಶ್ರೀಮತಿ ಸುವರ್ಣ

ಸಹಶಿಕ್ಷಕಿ, ಸರಕಾರಿ ಪ್ರೌಢ ಶಾಲೆ, ತೋಗುಣಶಿ
ತಾ. ಬಾದಾಮಿ, ಜಿ. ಬಾಗಲಕೋಟೆ

ಮಾರ್ಗದರ್ಶಕರು

ಡಾ. ಎಂ. ನಾಗರಾಜ

ಸಹ ಪ್ರಾಧ್ಯಾಪಕರು
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

ಅದ್ವೈತ ವೇದಾಂತದ ದೃಷ್ಟಿಯಲ್ಲಿ ಮಹಾಲಿಂಗರಂಗನ ಅನುಭವಾಮೃತ; ಒಂದು ವಿವೇಚನೆ

ಪರಿವಿಡಿ

ಅಧ್ಯಾಯ–೧ : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

- ಪ್ರಸ್ತಾವನೆ
- ಅಧ್ಯಯನದ ಉದ್ದೇಶ
- ವ್ಯಾಪ್ತಿ
- ಮಹತ್ವ
- ವಿಧಾನ
- ಮಿತಿಗಳು

ಅಧ್ಯಾಯ–೨ : ಮಧ್ಯಕಾಲಿನ ಕನ್ನಡ ಸಾಹಿತ್ಯದ ಪ್ರೇರಣೆ–ಧೋರಣೆಗಳು

ಅಧ್ಯಾಯ–೩ : ಮಹಾಲಿಂಗರಂಗನ ಕಾಲ, ದೇಶ ಮತ್ತು ಪರಿಸರ

ಅಧ್ಯಾಯ–೪ : ಮಹಾಲಿಂಗರಂಗನ ಅದ್ವೈತ ನೆಲೆಗಳು

ಅಧ್ಯಾಯ–೫ : ಮಹಾಲಿಂಗರಂಗನ ಮೇಲಾದ ಭಕ್ತಿ ಪಂಥಗಳ ಪ್ರಭಾವ

ಅಧ್ಯಾಯ–೬ : ಕನ್ನಡ ಸಾಹಿತ್ಯದಲ್ಲಿ ಮಹಾಲಿಂಗರಂಗನ ಅನುಭವಾಮೃತದ ಮಹತ್ವ

ಪರಾಮರ್ಶನ ಗ್ರಂಥಗಳು

***

ಅಧ್ಯಾಯ – ೧
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ:

ಮಧ್ಯಕಾಲೀನ ಕನ್ನಡ ಸಾಹಿತ್ಯವು ಹಲವು ವೈಶಿಷ್ಟದಿಂದ ಕೂಡಿದೆ. ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮೊದಲಾದ ಸಾಹಿತ್ಯ ಪ್ರಕಾರಗಳಿಂದ ಸಮೃದ್ಧಿಯಾದ ಸಾಹಿತ್ಯ ಕೃತಿಗಳನ್ನು ನೀಡಿದೆ. ಈ ಕಾಲಮಾನವು ಶರಣರ ಪ್ರಭಾವದಿಂದ ಅಥವಾ ವಚನ ಸಾಹಿತ್ಯದ ಪ್ರಭಾವದಿಂದ ಭಕ್ತಿ ಮತ್ತು ಮೋಕ್ಷಕ್ಕೆ ಮಹತ್ವವಾದ ಕಾಲವನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಮಧ್ಯಕಾಲೀನ ಸಾಹಿತ್ಯವೆಲ್ಲವೂ ಭಕ್ತಿಯ ಸ್ವರೂಪದ್ದೆಂದು ಹೇಳಿದರೂ ತಪ್ಪಾಗಲಾರದು. ಶರಣರ ಭಕ್ತಿ ಸಾಹಿತ್ಯ ಮುಂದೆ ದಾಸ ಸಾಹಿತ್ಯ ಉಗಮಕ್ಕೂ ಕಾರಣವಾಯಿತು. ಅಲ್ಲದೆ ಮಧ್ಯಕಾಲೀನ ಭಕ್ತಿ ಚಳುವಳಿಗಳು ರೂಪಗೊಂಡು ಹಲವಾರು ಸೈದ್ಧಾಂತಿಕ ತಾತ್ವಿಕ ಹಿನ್ನೆಲೆಯಲ್ಲಿ ವಿಮುಕ್ಷವನ್ನು ಕಂಡು ಕೊಳ್ಳಲು ಪ್ರಯತ್ನಿಸಿದವು. ಇಂಥ ಪ್ರಯತ್ನದಲ್ಲಿ ಒಂದಾದ ಅನುಭವಾಮೃತ ಕೃತಿಯೂ ಒಂದು. ಈ ಕೃತಿಯು ಕನ್ನಡದಲ್ಲಿ ರಚನೆಗೊಂಡಿರುವುದು ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವದ ಸಂಸ್ಕೃತದಲ್ಲಿ ಅನುವಾದಗೊಂಡಿರುವಂಥದ್ದು. ಹಾಗೆ ನೋಡಿದರೆ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ರಚನೆಗೊಂಡ ಪ್ರಮುಖ ಎರಡು ಕೃತಿಗಳಾದ ಚಾಮರಸನ ಪ್ರಭುಲಿಂಗಲೀಲೆ ಮತ್ತು ಮಹಾಲಿಂಗರಂಗನ ಅನುಭವಾಮೃತ ಕೃತಿಗಳೆಂದು ಹೇಳಲು ಹೆಮ್ಮೆಯಾಗುತ್ತಿದೆ. ಮಹಾಲಿಂಗರಂಗನ ಅನುಭವಾಮೃತವು ಅದ್ವೈತ ಪರಂಪರೆಯ ಹಿನ್ನಲೆಯಲ್ಲಿ ರಚನೆಗೊಂಡಿದೆ. ಮಹಾಲಿಂಗರಂಗನು ಕರ್ನಾಟಕದಲ್ಲಿ ಅಥವಾ ಭಾರತದ ಭಕ್ತಿ ಪರಂಪರೆಯಲ್ಲಿ ರೂಪಗೊಂಡ ದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ, ಭಕ್ತಿಪಂಥದ ಮೊದಲಾದ ಪರಂಪರೆಗಳಿದ್ದರೂ ಅದ್ವೈತ ಪರಂಪರೆಗೆ ತಾನು ತಾತ್ವಿಕ ವಿಚಾರಗಳನ್ನು ಅಳವಡಿಸಿಕೊಂಡು ಕೃತಿ ರಚನೆಯ ಉದ್ದಕ್ಕೂ ಈ ಅದ್ವೈತ ಸಿದ್ಧಾಂತದ ಪ್ರತಿಪಾದನೆಯಲ್ಲಿ ತೊಡಗಿಕೊಂಡಿರುವದು ವಿಶೇಷವೆನಿಸುತ್ತದೆ. ಇದಕ್ಕೆ ಕಾರಣ ಪರಿಣಾಮಗಳನ್ನು ಹುಡುಕಿ ಮಹತ್ವವನ್ನು ಶೋಧಿಸುವುದೇ ನನ್ನ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

ಜಗತ್ತಿನಲ್ಲಿ ನಡೆಯುವ ಧರ್ಮ ಕಾರ್ಯಗಳಲ್ಲಿ ಜೀರ್ಣೋದ್ಧಾರಕ್ಕಿರುವಷ್ಟು ಶ್ರೇಯ: ಪ್ರಾಪ್ತಿಯು ನವೀನ ರಚನೆಗಳಿಗಿಲ್ಲವೆಂದು ತಿಳಿದವರು ಭಾವಿಸುವರು. ಈ ನಿಯಮವು ಗ್ರಂಥ ರಚನೆಗೂ ಅನ್ವಯಿಸುವದು. ಮಹಾಲಿಂಗರಂಗನ ಅನುಭವಾಮೃತ ಗ್ರಂಥವು ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಪ್ರತಿಯೊಬ್ಬ ಕನ್ನಡಿಗನ ಪುಸ್ತಕ ಭಂಡಾರಕ್ಕೂ ಭೂಷಣವಾಗಿ ಪ್ರಸಾರಗೊಂಡಿರುವದಲ್ಲದೆ ಎಷ್ಟೋ ಕಡೆಗಳಲ್ಲಿ ಇದರ ಪುರಾಣವು ನಡೆಯುತ್ತಿರುವದುಂಟು. ಮತಧರ್ಮ, ರಾಜಾಶ್ರಯ, ಅನ್ಯಭಾಷಾ ಸಾಹಿತ್ಯ ಪ್ರೇರಣೆ ನೀಡಿದವು.

ಉದ್ದೇಶ:

ಮಹಾಲಿಂಗರಂಗನ ಅನುಭವಾಮೃತ ಗ್ರಂಥವು ಕನ್ನಡ ಭಾಷೆಯಲ್ಲಿದ್ದರೂ ಸಂಸ್ಕೃತದ ಸ್ವರೂಪ ಹೊಂದಿದೆ. ಈ ಗ್ರಂಥಕರ್ತನ ಭಾಷಾಭಿಮಾನ ಮೆಚ್ಚುವಂಥದ್ದು. ಕವಿ ತಾನು ಅದ್ವೈತ ಸಿದ್ಧಾಂತದ ಪ್ರತಿಪಾದಿ ಎನ್ನುವದನ್ನು ಈ ಗ್ರಂಥದ ಮೂಲಕವೇ ತೋರಿಸಿಕೊಟ್ಟಿದ್ದಾನೆ. ಈ ಅಂಶವನ್ನು ಎಳೆಎಳೆಯಾಗಿ ಸಂಶೋಧಿಸುವುದೇ ನನ್ನ ಅಧ್ಯಯನದ ಉದ್ದೇಶವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದ್ವೈತ ಸಿದ್ದಾಂತವನ್ನು ನಿರೂಪಿಸಿದ ಮಹತ್ವದ ಕೃತಿಗಳಲ್ಲಿ ಮಹಾಲಿಂಗರಂಗನ ಅನುಭವಾಮೃತ ಅತೀ ಮಹತ್ವದ ಹಾಗೆ ನೋಡಿದರೆ ಅದ್ವೈತ ಸಿದ್ಧಾಂತ ಪ್ರತಿಪಾದನೆಯಲ್ಲಿ ಈ ಕೃತಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ಕನ್ನಡದ ಬೇರೊಂದು ಕೃತಿ ಇಲ್ಲವೆಂದರೆ ತಪ್ಪಾಗಲಾರದು. ಕನ್ನಡಿಗರಿಗೆ ಅದ್ವೈತ ಸಿದ್ಧಾಂತದ ಪ್ರಮುಖ ತತ್ವಗಳನ್ನು ತಿಳಿಸುವ ಮಹತ್ವದ ಅಂಶಗಳು ಇಲ್ಲಿ ಒಡಮೂಡಿವೆ. ಬಳಸಿದ ಭಾಷೆ ಸರಳವಾಗಿದೆ. ಈ ಎಲ್ಲ ಅಂಶಗಳನ್ನು ಅಧ್ಯಯನದಲ್ಲಿ ಒಳಪಡಿಸುವ ಸಂಶೋಧನೆಯಲ್ಲಿ ಮಹತ್ವದ ಉದ್ದೇಶ ನನ್ನದಾಗಿದೆ.

ಮಹಾಲಿಂಗರಂಗನ ಅನುಭವಾಮೃತ ಗ್ರಂಥವು ಕನ್ನಡದಿಂದ ಸಂಸ್ಕೃತದ ಸ್ವರೂಪವನ್ನು ಹೊಂದಿರುತ್ತದೆ. ಈ ಗ್ರಂಥಕರ್ತನ ಕರ್ಣಾಟಕ ಭಾಷಾಭಿಮಾನಕ್ಕಂತು ಬೇರೆ ಹೇಳಬೇಕಾದಷ್ಟೇ ಇಲ್ಲ. ಈ ಗ್ರಂಥಕರ್ತನು ತಾನು ಅದ್ವೈತಿಯೆಂಬುದನ್ನು ಈ ಗ್ರಂಥದಿಂದಲೇ ತೋರಿಸಿಕೊಂಡಿದ್ದಾನೆ. ಇವನು ಶ್ರೀಶೈಲದ ಶ್ರೀ ಮಲ್ಲಿಕಾರ್ಜುನದೇವರ ಭಕ್ತ ಕೋಟಿಯವನೆಂದು. ಈ ಗ್ರಂಥದ ಇಷ್ಟದೇವತಾ ಪ್ರಾರ್ಥನೆ ಮೊದಲಾದವುಗಳಿಂದ ತಿಳಿಯುತ್ತದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದ್ವೈತ ತತ್ವವನ್ನು ನಿರೂಪಿಸುವ ಕಾರ್ಯಗ್ರಂಥಗಳಲ್ಲಿ ಮಹಾಲಿಂಗರಂಗನ ಅನುಭವಾಮೃತ ಕಾವ್ಯಕ್ಕೆ ಸರಿಸಾಟಿಯಾದ ಕಾವ್ಯ ಇನ್ನೊಂದಿಲ್ಲ. ಸಂಸ್ಕೃತ ಅರಿಯದ ಕನ್ನಡಿಗನಿಗೆ ಅದ್ವೈತಮತದ ಪ್ರಮುಖ ತತ್ವಗಳನ್ನು ತಿಳಿಯಾದ ಭಾಷೆಯಲ್ಲಿ ದೃಷ್ಟಾಂತ ಸಂಪತ್ತಿನಿಂದ ನಿರೂಪಿಸಿದ ಗ್ರಂಥವೇ ಅನುಭವಾಮೃತ ಈ ಕಾವ್ಯದಲ್ಲಿ ತತ್ವಮಸಿ ನಿರ್ಣಯ, ಸಪ್ತ ಭೂಮಿಕೆಗಳು, ಪರಮಾತ್ಮನ ನಿರೂಪಣ, ಮಾಯಾಮಿಥ್ಯಾತ್ಮ, ಜೀವತ್ರಯ, ಜೀವನ್ಮುಕ್ತಿ ನಿರ್ಗುಣಾರಾಧನೆ ಮೊದಲಾದ ಅದ್ವೈತ ವೇದಾಂತದ ವಿಷಯಗಳನ್ನು ಲಲಿತ ಕಾವ್ಯ ಶೈಲಿಯಲ್ಲಿ ಕವಿ ನಿರೂಪಿಸಿದ್ದಾನೆ. ಇಷ್ಟು ಸೊಗಸಾದ ಅದ್ವೈತ ವೇದಾಂತದ ಷಟ್ಪದಿಕಾವ್ಯ ಕನ್ನಡದಲ್ಲಿ ಇನ್ನೊಂದಿಲ್ಲ.

ವ್ಯಾಪ್ತಿ:

ಕನ್ನಡ ತಾತ್ವಿಕ ಅಂಶಗಳನ್ನು ಅಧ್ಯಯನಗೊಳಿಸುವುದರ ಮೂಲಕ ಮಧ್ಯಕಾಲೀನದಲ್ಲಿ ರೂಪಗೊಂಡ ಭಕ್ತಿಪಂಥಗಳನ್ನೊಳಗೊಂಡಂತೆ ಅದ್ವೈತ ಸಿದ್ಧಾಂತದ ಪ್ರಭಾವ ಪ್ರೇರಣೆಗಳನ್ನೊಳಗೊಂಡಂತೆ ಈ ಕೃತಿಯಲ್ಲಿ ಒಡಮೂಡಿದ ತಾತ್ವಿಕ ವಿಚಾರಗಳನ್ನು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ತರಲು ಬಯಸಿದ್ದೇನೆ. ಅಲ್ಲದೇ ಮಹಾಲಿಂಗರಂಗನ ಮೇಲಾದ ಪ್ರಾಚೀನ ಕವಿಗಳ ಪ್ರಭಾವ ಭಕ್ತಿ ಪರಂಪರೆ ಹಾಗೂ ಅನುಭಾವಿಕ ನೆಲೆಗಳಲ್ಲಿ ನನ್ನ ಅಧ್ಯಯನದ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಅಲ್ಲದೆ ಸಂಶೋಧನಾ ವ್ಯಾಪ್ತಿಯನ್ನು ಸೀಮಿತಗೊಳಿಸಿರುತ್ತದೆ.

೧೯೧೦ರಲ್ಲಿ ರಚಿಸಿದ ಕೃಷ್ಣಮಹೇಶ್ವರಿ ನಾಟಕವು ಕನ್ನಡದಲ್ಲಿ ಮೈಸೂರು ರಾಜವಂಶವನ್ನು ಕುರಿತು ರಚಿಸಿದ ಮೊಟ್ಟಮೊದಲನೇ ಐತಿಹಾಸಿಕ ನಾಟಕವಾಗಿದೆ. ಶ್ರೀ ವಿದ್ಯಾರಣ್ಯ ಕಾವ್ಯವು ೨೬ಕ್ಕೂ ಹೆಚ್ಚಿನ ಛಂದಸ್ಸುಗಳಲ್ಲಿ ರಚಿತವಾಗಿದೆ. ಕೇವಲ ಮೂಲ ಗದ್ಯಾನುವಾದಗಳಷ್ಟೇ ಪ್ರಕಟವಾಗಿದ್ದ ಮಹಲಿಂಗರಂಗನ ಅನುಭವಾಮೃತ ಕಾವ್ಯವನ್ನು ಹತ್ತಾರು ಹಸ್ತಪ್ರತಿಗಳಿಂದ ಶುದ್ಧ ಪಾಠದ ಪ್ರತಿಯನ್ನು ಸಿದ್ಧಪಡಿಸಿ ಗ್ರಂಥ ಸಂಪಾದನೆ ಮಾಡಿ 'ಸರ್ವಾರ್ಥ ಸಂದರ್ಶಿನಿ' ಎಂಬ ಟೀಕೆಯನ್ನು ವಿದ್ವತ್ ಪೂರ್ಣವಾಗಿ ಬರೆದ ಏಕೈಕ ಸಾಹಿತಿ, ವಿದ್ವಾಂಸ ಹೊಸಕೆರೆ ಚಿದಂಬರಯ್ಯನವರು.

೧೮೪೦ ರಲ್ಲಿ ಅನುಭವಾಮೃತವು ಕನ್ನಡದಲ್ಲಿ ಮೊದಲು ಅಚ್ಚಾದುದು ಮೈಸೂರಿನ ಅರಮನೆಯ ಕಲ್ಲಚ್ಚಿನ ಮುದ್ರಾಣಾಲಯದಲ್ಲಿ. ಅಲ್ಲಿಂದೀಚೆಗೆ ೧೯ ಮತ್ತು ೨೦ನೇ ಶತಮಾನದಲ್ಲಿ ಅನೇಕ ಮುದ್ರಣಗಳನ್ನು ಕಂಡಿದೆ. ೨೦ನೇ ಶತಮಾನದಲ್ಲಿ ಕುಮಾಂಡೂರು ರಾಮಸ್ವಾಮಯ್ಯಂಗಾರ್ ಅವರು ತಿರುಮಲೆ ಶ್ರೀನಿವಾಸಾಚಾರ್ಯ ಮಿರ್ಲೆ ನಂಜುಂಡಯ್ಯನವರ ಮೂಲ ತಾತ್ಪರ್ಯ ಸಹಿತ ಆವೃತಿಗಳು ಜನಪ್ರೀಯವಾಗಿದ್ದು, ಮರು ಮುದ್ರಣಗಳನ್ನು ಕಂಡಿವೆ. ೨೧ನೇ ಶತಮಾನದಲ್ಲಿ ೨೦೦೪ರಲ್ಲಿ ಬಿದಿರಹಳ್ಳಿ ನರಸಿಂಹಮೂರ್ತಿ ಅವರು ಮೂಲವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ೨೦೧೧ರಲ್ಲಿ ಬಿ. ಎಸ್. ಸಣ್ಣಯ್ಯನವರು ಸಂವಹನ ಪ್ರಕಾಶನದಿಂದ ಅನುಭವಾಮೃತವನ್ನು ಮೂಲ ಮತ್ತು ತಾತ್ಪರ್ಯಸಹಿತ ಪ್ರಕಟಿಸಿದ್ದಾರೆ. ಇವರಿಬ್ಬರೂ ಹೊಸಕೆರೆ ಚಿದಂಬರಯ್ಯನವರ ಪಠ್ಯವನ್ನೇ ಯಥಾವತ್ತಾಗಿ ಕೊಟ್ಟಿದ್ದಾರೆ. ಅರಾಸೇ ಅವರು ಅನುವಾದದೊಡನೆ ಕೆಲವು ಪಾಠಾಂತರಗಳ ಸಹಿತ ೧೯೯೯ರಲ್ಲಿ ಅನುಭವಾಮೃತವನ್ನು ಚಿದಂಬರಯ್ಯನವರ 'ಗೀತಾರ್ಥ ಚಂದ್ರಿಕೆ' ೨೦೦೫ ಮತ್ತು 'ಭಗವದ್ಗೀತಾರ್ಥ ಸಾರ' ೨೦೦೨ರಲ್ಲಿ ಗ್ರಂಥಗಳನ್ನು ಪುನರ್ಮುದಿಸಿದರು.

ಮಹತ್ವ:

ಈ ಅನುಭವಾಮೃತ ಕೃತಿಯು ಸುಲಿದ ಬಾಳೆಯ ಹಣ್ಣಿನ ಹಾಗೆ ಓದುಗರಿಗೆ ಟಿಪ್ಪಣೆ, ವಿವರಣೆ, ಪಾಠಾಂತರ, ಶಬ್ದಾರ್ಥಗಳಿಂದ ಸುಲಭಗೊಳಿಸಿದ್ದಾರೆ. ಅದ್ವೈತ ವೇದಾಂತದ ದೃಷ್ಟಿಯಲ್ಲಿ ವೇದಾಂತದ ವಿಷಯಗಳನ್ನು ಲಲಿತ ಶೈಲಿಯಲ್ಲಿ ಕವಿ ನಿರೂಪಿಸಿದ್ದಾನೆ. ತಿಳಿಯಾದ ಭಾಷೆಯಲ್ಲಿ ದೃಷ್ಟಾಂತ ಸಂಪತ್ತಿನಿಂದ ನಿರೂಪಿಸಿದ ಗ್ರಂಥವೇ ಅನುಭವಾಮೃತ.

ವಿಧಾನ, ಮಿತಿಗಳು:

ಗ್ರಂಥದ ಭಾಷೆಯು ಅಷ್ಟೇನೂ ಬಿಗಿಯಾಗಿಲ್ಲ. ಪ್ರಯೋಗಗಳು ಎಷ್ಟೋ ಕಡೆ ವ್ಯಾಕರಣಕ್ಕೆ ದೂರವಾಗುತ್ತವೆ. ಈ ಗ್ರಂಥದಲ್ಲಿ 'ನಿರಾಳ' ಎಂಬ ಮಾತು ಬಹುಕಡೆ ಬಂದಿದೆ. ಅದು ಸಂಸ್ಕೃತವಾಗಿ ಕಾಣಲಿಲ್ಲ. ಆದರೂ ಸಂಸ್ಕೃತ ಶಬ್ದ ಭಾಷಾಂತರಕಾರರೂ ಈ ಶಬ್ದವನ್ನು ಉಪಯೋಗಿಸಿದ್ದಾರೆ.

ಯಾವ ಯೋಚನೆಯೂ ಇಲ್ಲದಿರುವಿಕೆ ಎಂಬರ್ಥದಲ್ಲಿ ಕನ್ನಡದಲ್ಲಿ ಅದು ಬಳಕೆಯಲ್ಲಿದೆ. ಆ ಮಾತನ್ನು ಇವನು ಬ್ರಹ್ಮಕ್ಕೆ ಅನ್ವಯಿಸಿ ಎಷ್ಟೋ ಕಡೆ ಸಂಸ್ಕೃತ ಶಬ್ದಗಳ ಸಂಧಿಯಲ್ಲಿಯೂ ಸೇರಿಸಿದ್ದಾನೆ.

ಅಧ್ಯಾಯ – ೨
ಮಧ್ಯಕಾಲೀನ ಸಾಹಿತ್ಯದ ಪ್ರೇರಣೆ–ಧೋರಣೆಗಳು

ಪ್ರಾಚೀನ ಕನ್ನಡ ಸಾಹಿತ್ಯಕ್ಕಿರುವಂತೆ ಮಧ್ಯಕಾಲೀನ ಕನ್ನಡ ಸಾಹಿತ್ಯಕ್ಕೆ ಹಲವಾರು ಪ್ರೇರಣೆ–ಧೋರಣೆ ನಾವು ಕಂಡುಕೊಳ್ಳಬಹುದು. ಪ್ರಾಚೀನ ಕರ್ನಾಟಕದ ಕನ್ನಡ ಸಾಹಿತ್ಯಕ್ಕೆ ಮತಧರ್ಮ, ರಾಜಾಶ್ರಯ, ಅನ್ಯಭಾಷಾ ಸಾಹಿತ್ಯ ಪ್ರೇರಣೆ ನೀಡಿದಂತೆ ಕನ್ನಡ ಸಂಸ್ಕೃತ ಮಹಾಭೂಯಿಷ್ಠ ಮಹಾಕಾವ್ಯಗಳನ್ನು ರಚಿಸಿದಂತೆ ಹಲವಾರು ರೀತಿಯ ಪ್ರಭಾವಕ್ಕೊಳಗಾಗಿ ಹಲವಾರು ರೀತಿಯ ಮಹಾಕಾವ್ಯಗಳು ರಚನೆಗೊಂಡಿವೆ.

ವಸ್ತುಕ–ವರ್ಣಕ, ಮಾರ್ಗ–ದೇಶೀ, ಜನಸಮ್ಮುಖ–ಪಂಡಿತಸಮ್ಮುಖ, ಪಠ್ಯ–ಧ್ಯೇಯ, ಸಾಮಾಜಿಕ ಸತ್ವ ಇವು ಧೋರಣೆಗಳಾದವು.

ಈ ಅನುಭವಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿರುವುದು ಅಧಿಕಾರ ವಿಶೇಷಗಳನ್ನು ಪ್ರತಿಯೊಂದು ಅಧ್ಯಾಯದಲ್ಲಿಯ ನೆನಪುಗೊಟ್ಟಿರುವುದು ಜೀವಸ್ವರೂಪವನ್ನು ಹೇಳಿರುವರು. ತತ್ವ ಪದದ ಅರ್ಥವನ್ನು ಶೋಧನೆ ಮಾಡುವ ಪ್ರಕರಣದಲ್ಲಿ ವಾಚಕರನ್ನು ಮನಗಾಣಿಸುವುದಕ್ಕೆ ತನ್ನ ಸರ್ವ ಸಾಹಸವನ್ನು ಮಾಡಿರುವರು. ಎಂಟು ಉಪನಿಷತ್ತುಗಳು, ಭಗವದ್ಗೀತಾ ಭಾಷ್ಯದ ಎಂಟು ಅಧ್ಯಾಯ ಒಂದು ಸಂಪುಟವು ಈ ಗ್ರಂಥಕ್ಕೆ ಪ್ರೇರಣೆ ಆಗಿರುವುದು.

ವಿವಿಧ ಚರ್ಚೆಗಳು, ಉಪನ್ಯಾಸಗಳು, ಭಜನೆ, ಉತ್ಸವಗಳು, ವೇದಾಂತ ಕಥಾವಳಿ, ಶ್ರೀ ಶಂಕರರ ಸಿದ್ಧಾಂತ, ಭಾಷ್ಯಗಳು, ಇತರ ಕೃತಿಗಳು, ಇತಿಹಾಸ, ವೇದಾಂತ ಪ್ರಕ್ರಿಯಾ, ಪ್ರತ್ಯಭಿಜ್ಞ, ಇವೆಲ್ಲ ಮಹಾಲಿಂಗರಂಗನ ಅನುಭವಾಮೃತಕ್ಕೆ ಪ್ರೇರಣೆ. ಮಹಾಲಿಂಗರಂಗನ ಅನುಭವಾಮೃತ ಕೃತಿಗೆ ಧೋರಣೆಗಳಾಗಿ ಪರಿಣಮಿಸಿದವು.

***

ಅಧ್ಯಾಯ – ೩

ಮಹಾಲಿಂಗರಂಗನ ಕಾಲ, ದೇಶ ಮತ್ತು ಪರಿಸರ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಲವಾರು ಕವಿಗಳು ಹುಟ್ಟಿ ಬೆಳೆದಿದ್ದಾರೆ. ಕಾವ್ಯಗಳ ಮೂಲಕ ವಿಜೃಂಭಿಸಿದ್ದಾರೆ. ಅದರಲ್ಲಿ ಅವರು ಯಾವ ಕಾಲಕ್ಕೆ ಸಂಬಂಧಿಸಿದವರು ಎನ್ನುವುದು ಕೂಡ ಮುಖ್ಯವಾಗುತ್ತದೆ. ಸರಿಯಾದ ಕಾಲವಿಲ್ಲದೇ ಹಲವಾರು ವಿದ್ವಾಂಸರ ಚರ್ಚೆಗೆ ಒಳಪಟ್ಟಿವೆ. ಹಾಗೆ ಮಹಾನ್ ಕವಿ ಮಹಾಲಿಂಗರಂಗನ ಕಾಲ ನಿರ್ಣಯಿಸುವುದು, ಅಧ್ಯಯನಕ್ಕೆ ಒಳಪಡಿಸುವುದು ಕೂಡ ಮುಖ್ಯವಾಗಿರುತ್ತದೆ. ಆತ ಯಾವ ಪ್ರದೇಶದವರು, ಆತನ ನಂತರ ಬಂದ ಕವಿಗಳ ಉಲ್ಲೇಖಿತ ಸ್ಥಳದ ಆಧಾರದ ಮೇಲೆ ಆತನ ದೇಶವನ್ನು ಅಧ್ಯಯನಕ್ಕೆ ಬಳಸಿಕೊಳ್ಳುತ್ತೇನೆ.

ಮಹಾಲಿಂಗರಂಗ ಇಂಥ ದೊಡ್ಡ ಕವಿ ಎನಿಸಿಕೊಳ್ಳಬೇಕಾದರೆ ಆತನ ಮೇಲೆ ಆದ ಪ್ರಭಾವ ಯಾರು ಪ್ರೇರಣೆ ನೀಡಿದರು. ಈ ತರಹದ ಒಂದು ಅದ್ವೈತ ಸಿದ್ಧಾಂತದ ಪ್ರತಿಪಾದಕರು ಯಾರು ಈತನ ಮೇಲೆ ಪ್ರಭಾವ ಬೀರಿದರು ಎನ್ನುವದನ್ನು ನನ್ನ ಅಧ್ಯಯನಕ್ಕೆ ಒಳಪಡಿಸಿಕೊಳ್ಳುತ್ತೇನೆ.

ಕವಿಯ ಅಭಿಪ್ರಾಯದಂತೆ ಮಹಾಲಿಂಗರಂಗನು **'ರಂಗಾವಧೂತ'** ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನೆಂದೂ, ದಾವಣಗೆರೆಯಲ್ಲಿ ಸಮಾಧಿಸ್ಥನಾದನೆಂದೂ ಹೇಳಿದ್ದಾರೆ.

ರಂಗಾವಧೂತನು ಸುಮಾರು ೪೦ ವರ್ಷಗಳ ಹಿಂದೆ ೪೦–೫೦ ವಯಸ್ಸಿನಲ್ಲಿ ಸಮಾಧಿಸ್ಥನಾಗಿರುವದರಿಂದ ಅವನು ಅನುಭವಾಮೃತಕಾರನಲ್ಲವೆಂದು ಗೊತ್ತಾಯಿತು. ಅವನು ಸುಮಾರು ಮಹಾಲಿಂಗರಂಗನ ಪ್ರಶಿಷ್ಯನಾಗಿರಬಹುದೆಂದು ತೋರುತ್ತದೆ.

ಆಕಳಿಕೆ ಮೊದಲಾದ ಸಂದರ್ಭದಲ್ಲಿ ಅವನು ಯಾವಾಗಲೂ ಮಹಾಲಿಂಗರಂಗ, ಮಹಾಲಿಂಗರಂಗ ಎನ್ನುತ್ತಿದ್ದನಂತೆ. ಹೀಗೆ ಅವನು ಗುರುವಿನ ನಾಮಸ್ಮರಣೆ ಆಡುವದನ್ನು ನೋಡಿ ಕೆಲವರು ಅವನನ್ನೇ ಮಹಾಲಿಂಗರಂಗನೆಂದು ಭ್ರಮಿಸಿರುವಂತೆ ತೋರುತ್ತದೆ.

ಕವಿಯ ಪ್ರಕಾರ ಇವನ ಕಾಲದ ವಿಷಯವನ್ನು ತೆಗೆದುಕೊಂಡರೆ ಕವಿ ಚರಿತ್ರಕಾರರು ಇವನಿಗೆ ಕ್ರಿ.ಶ. ೧೬೭೫ನ್ನು ಹಾಕಿದ್ದಾರೆ.

ಕವಿಯ ಸ್ಥಳ:

ಕವಿ ಗ್ರಂಥಕರ್ತನ ವಾಸಸ್ಥಾನದ ವಿಚಾರವನ್ನು ತೆಗೆದುಕೊಂಡು ಉಚ್ಚಂಗಿಕೋಟೆಯವೋವ ಎಂಬ ಹೋಲಿಕೆಯನ್ನು ಕೊಟ್ಟಿರುತ್ತಾರೆ.

ಕವಿ ತನ್ನ ಕಾವ್ಯದಲ್ಲಿ 'ರಂಕ', 'ಸಂಭಾವಳಿಸುತ' ಎಂಬ ಮಾತುಗಳನ್ನು ಉಪಯೋಗಿಸಿದ್ದರಿಂದ ಇವು ಮಹಾರಾಷ್ಟ್ರದ ಶಬ್ದಗಳು ಆದ್ದರಿಂದ ಕವಿಯು ಮಹಾರಾಷ್ಟ್ರದ ಮತ್ತು ಕನ್ನಡದ ಸಂಧಿಸ್ಥಾನದವನೆಂದು ಹೇಳಬೇಕಾಗುತ್ತದೆ ಎಂದು ಲೇಖಕರು ಹೇಳುತ್ತಾರೆ.

ಕವಿಯ ಜೀವನ ವಿಚಾರ:

ಗ್ರಂಥಕಾರನು ತಾನು ಅದ್ವೈತಿಯೆಂಬುದನ್ನ ಈ ಗ್ರಂಥದಿಂದಲೇ ತೋರಿಸಿಕೊಂಡಿದ್ದಾನೆಂದು ಲೇಖಕರು ಹೇಳಿದ್ದಾರೆ.

ಇವನು ಶ್ರೀಶೈಲದ ಶ್ರೀ ಮಲ್ಲಿಕಾರ್ಜುನ ದೇವರ ಭಕ್ತಿಕೋಟಿಯವನೆಂದು ಈ ಗ್ರಂಥದ ಇಷ್ಟ ದೇವತಾ ಪ್ರಾರ್ಥನೆ ಮೊದಲಾದವುಗಳಿಂದ ತಿಳಿದುಬರುತ್ತದೆ.

'ಮಾತುಗಳೊಳು ಶೈವ' ಎಂದು ತಾನೇ ಹೇಳಿರುವದರಿಂದಲೂ ಅಲ್ಲಲ್ಲಿ ಶಿವಮಹಿಮ್ನಸ್ತೋತ್ರದ ಭಾವಗಳನ್ನು ತಂದಿರುವದರಿಂದಲೂ ಇವನು ಶಿವೋಪಾಸಕ ಎಂದು ವ್ಯಕ್ತವಾಗುತ್ತದೆ. ಪದ್ಯಗಳಲ್ಲಿ ಸನ್ಯಾಸಿಯನ್ನು ಜರಿದಿರುವದರಿಂದ ಇವನು ಗೃಹಸ್ಥಾಶ್ರಮಿಯಾಗಿದ್ದನೆಂದು ತಿಳಿಯಬರುತ್ತದೆ.

ಕವಿಯ ಕನ್ನಡ ಭಾಷಾಭಿಮಾನ:

ಲೇಖಕರು ಈ ಗ್ರಂಥ ಕರ್ತನ ಕರ್ಣಾಟಕ ಭಾಷಾಭಿಮಾನಕ್ಕಂತು ಬೇರೆ ಹೇಳಬೇಕಾದದ್ದೇ ಇಲ್ಲ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದ್ವೈತ ತತ್ವವನ್ನು ನಿರೂಪಿಸುವ ಕಾವ್ಯ ಗ್ರಂಥಗಳಲ್ಲಿ ಮಹಾಲಿಂಗರಂಗನ ಅನುಭವಾಮೃತ ಕಾವ್ಯಕ್ಕೆ ಸರಿಸಾಟಿಯಾದ ಕಾವ್ಯ ಇನ್ನೊಂದಿಲ್ಲ.

ಲೇಖಕರು ಹೇಳುತ್ತಾರೆ, ಇದರ ಜನಪ್ರಿಯತೆ ಎಷ್ಟಿದೆ ಎಂದರೆ ಸರ್ವಜ್ಞ ವಚನ, ಸೋಮೇಶ್ವರ ಶತಕ, ಕನಕದಾಸರ ಹರಿಭಕ್ತಿಸಾರ, ಪುರಂದರರರ ಕೀರ್ತನೆ, ಕುಮಾರವ್ಯಾಸ ಭಾರತ, ಜೈಮಿನಿಭಾರತ, ತೊರವೆ ರಾಮಾಯಣದ ಕಾವ್ಯಗಳ ಹಾಗೆ ಜನರ ಬಾಯಲ್ಲಿ ನಲಿದಾಡುತ್ತಿರುವ ಕಾವ್ಯಗಳಲ್ಲಿ ಇದೂ ಒಂದು. ಇಂದೂ ಜನರ ನಾಲಿಗೆಯ ಮೇಲೆ ಸುಳಿದಾಡುತ್ತಿರುವ 'ಸುಲಿದ ಬಾಳೆಹಣ್ಣಿನಂದದಿ' ಪದ್ಯ ಅದರ ಜನಪ್ರಿಯತೆ ಉಳಿದಿರುವುದಕ್ಕೆ ಸಾಕ್ಷಿಯಾಗಿದೆ.

ಅನುಭವಾಮೃತವು ಕನ್ನಡದಲ್ಲಿ ಮೊದಲು ಅಚ್ಚಾದುದು ಮೈಸೂರು ಅರಮನೆಯ ಕಲ್ಲಚ್ಚಿನ ಮುದ್ರಣಾಲಯದಲ್ಲಿ ೧೮೪೦ರಲ್ಲಿ. ಅನುಭವಾಮೃತ ಕಾವ್ಯದ ಮೊದಲನೆಯ ಅಧ್ಯಾಯದಲ್ಲಿ ವೇದವ್ಯಾಸ ಮಹರ್ಷಿಗಳು ತಮ್ಮ ಮಗನಾದ ಶುಕಮುನಿಗೆ ಆನಂದದಿಂದ ತತ್ವಜ್ಞಾನಿಗಳು ಮೆಚ್ಚುವ ರೀತಿಯಲ್ಲಿ ಆತ್ಮಜ್ಞಾನವನ್ನು ಲೇಸನ್ನವಂತೆ ವಿಸ್ತಾರವಾಗಿ ತಿಳಿಸಿದ್ದಾರೆ ಎಂದಿದೆ.

ಶ್ರೀಮದನುಪತೇಜ, ನತಜನ
ಕಾಮಿತಾರ್ಥಫಲಪ್ರದಾಯಕ
ಸೋಮಶೇಖರ, ಸುರಮುನೀಂದ್ರಾರ್ಚಿತಪದಾಂಭೋಜ
ಸಾಮಗಾನಪ್ರಿಯ, ಸದಾಶಿವ,
ವಾಮಭಾಗಾ ಶ್ರೀತಭವಾನೀ
ಪ್ರೇಮ, ಶ್ರೀಗಿರಿಮಲ್ಲಿಕಾರ್ಜುನ, ಸಲಹು ಮೂಜಗವ.

ಶುಭಕರನೂ ಅಸಮಾನಕಾಂತಿಯಿಂದ ಕೂಡಿರುವನೂ, ಭಕ್ತಜನರು ಅಪೇಕ್ಷಿಸಿದ ಫಲಗಳನ್ನು ಅನುಗ್ರಹಿಸುವವನೂ ಚಂದ್ರಶೇಖರನೂ ದೇವಮುನಿ ಶ್ರೇಷ್ಠರಿಂದ ಪೂಜಿಸಲ್ಪಟ್ಟ ಪಾದಕಮಲಗಳನ್ನು ಉಳ್ಳವನೂ, ಸಾಮವೇದಗಾನಲೋಲನೂ, ಸದಾಕಾಲದಲ್ಲೂ ಮಂಗಳಸ್ವರೂಪನಾದ, ಎಡೆತೊಡೆಯ ಮೇಲಿರುವ ಪಾರ್ವತಿಯ ಮೇಲೆ ಪ್ರೇಮವುಳ್ಳವನೂ ಆಗಿರುವ ಶ್ರೀಶೈಲವೆಂಬ ಮಹಾಕ್ಷೇತ್ರದ ಸ್ವಾಮಿಯಾದ ಮಲ್ಲಿಕಾರ್ಜುನದೇವನೇ ಮೂರು ಲೋಕಗಳನ್ನು ಕಾಪಾಡು. ಎಂಬ ಇಷ್ಟದೇವತಾ ಸ್ತುತಿ ಇದೆ.

ಕನ್ನಡದ ನುಡಿಯೆಂದು ತಿರಸ್ಕಾರ ಮಾಡುವ ಹಿರಿಯರಾದ ಸಂಸ್ಕೃತ ವಿದ್ವಾಂಸರಿಗೆ ವಿನಯದಿಂದ ಅಳುಕುತ್ತಾ ಹೇಳುತ್ತಿದ್ದೇನೆ. ಕನ್ನಡದಲ್ಲಿ 'ಕನ್ನಡಿ' ಎನ್ನುತ್ತಾರೆ. ಸಂಸ್ಕೃತದಲ್ಲಿ ದರ್ಪಣ ಎನ್ನುತ್ತಾರೆ.

ಭಾಷಾ ವ್ಯತ್ಯಾಸವಲ್ಲದೆ ವಿಷಯ ವಸ್ತುವಿನಲ್ಲಿ ವ್ಯತ್ಯಾಸವಿಲ್ಲ. ಸದ್ಗುಣ ಸಂಪನ್ನರಾದ ವಿದ್ವಾಂಸರು ನಾನು ಹೇಳಿದ್ದರಲ್ಲಿ ಏನಾದರೂ ಲೋಪದೋಷಗಳಿದ್ದರೆ ದಯಮಾಡಿ ಕ್ಷಮಿಸಬೇಕು ಎಂದು ಕವಿ ಕೋರಿರುವುದನ್ನು ಲೇಖಕರು ಹೇಳಿದ್ದಾರೆ.

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ? ಸಂಸ್ಕೃತದಲಿನ್ನೇನು?

ಸಿಪ್ಪೆಯನ್ನು ಸುಲಿದ ಬಾಳೆಯ ಹಣ್ಣಿನ ಹಾಗೆ, ಹೆರೆದು ಸಿಪ್ಪೆ ತೆಗೆದು ಹಾಕಿದ ಕಬ್ಬಿನ ಕೋಲಿನ ಹಾಗೆ, ಕಾಯಿಸಿ ಆರಿಸಿದ ಹದವಾದ ಬಿಸಿಯ ಹಾಲಿನ ಹಾಗೆ, ಸರಳವಾಗಿರುವ, ಸುಂದರವೂ ಆಗಿರುವ ಕನ್ನಡದ ಭಾಷೆಯ ಗ್ರಂಥಗಳನ್ನು ಓದಿ ಮನನ ಮಾಡಿಕೊಂಡು ಆತ್ಮಜ್ಞಾನ ಹೊಂದಿ, ಹುಟ್ಟು-ಸಾವುಗಳ ದುಃಖವೆಂಬ ತೊಡಕಿನಿಂದ ಬಿಡುಗಡೆ ಪಡೆಯುವ ಮುಕ್ತಿ ಪದವಿಯನ್ನು ಸಂಪಾದಿಸಿಕೊಂಡರೆ ಸಾಲದೇ? ಸಂಸ್ಕೃತ ಭಾಷೆಯ ಅಗತ್ಯವೇನಿದೆ? ಇಲ್ಲಿ ಹುಟ್ಟು-ಸಾವಿನ ದುಃಖವೆಂಬ ತೊಡಕಿನಿಂದ ಬಿಡುಗಡೆ ಆಗುವದನ್ನು 'ಮೋಕ್ಷವ' ಎಂದಿದ್ದಾರೆ ಕವಿಗಳು.

ಸಂಸ್ಕೃತದಲ್ಲಿನೇನು ಎಂದರೆ ಸಂಸ್ಕೃತದ ಬಗ್ಗೆ ತಿರಸ್ಕಾರವಿಲ್ಲ. ಆತ್ಮಜ್ಞಾನ ಹೊಂದಲು ಕನ್ನಡ ಭಾಷೆಯ ಗ್ರಂಥಗಳೇ ಸಾಕಾಗುತ್ತದೆ. ಹಾಲನ್ನು ಕುಡಿಯಲು ಕೊಟ್ಟರೆ ಕುಡಿಯಲು ಒಪ್ಪದ ಚಿಕ್ಕಹುಡುನ ರೀತಿಯಂತೆ, ತನ್ನ ಒಳಿತನನ್ನು ಅರ್ಥಮಾಡಿಕೊಳ್ಳದ ಮೂಢನಂತೆ, ಈ ಮನಸ್ಸು ಏನು ಹೇಳಿದರೂ ಒಪ್ಪುವದಿಲ್ಲ. ಇಂಥ ಮನಸ್ಸು ಕೇಳುವಂತೆ ಮಾಡುವುದು ಹೇಗೆ? ಮುಗ್ಧಬಾಲಿಕೆಯನ್ನು ತಲೆಯನ್ನು ನೇವರಿಸಿ ಹಿತನುಡಿಗಳಿಂದ ಕ್ರಮೇಣ ಅದು ಮೆಲ್ಲಮೆಲ್ಲನೆ ಹತೋಟಿಗೆ ಬರುತ್ತದೆ.

***

ಅಧ್ಯಾಯ – ೪
ಮಹಾಲಿಂಗರಂಗನ ಅದ್ವೈತ ನೆಲೆಗಳು

ಬಲ್ಲವರ ಬೆಸಗೊಂಬ; ಶಾಸ್ತ್ರದೊ
ಳುಳ್ಳ ಸಾರವ ತಿಳಿವ; ಸಾಧುಗ
ಳಲ್ಲಿ ಸಂಗವ ಪಡೆವನವರಾಚರಣೆಯಲಿ ನಡೆವ
ಸಲ್ಲಲಿತ ಸದ್ಭಾವನೆಗಳು
ಮೆಲ್ಲನಭ್ಯಾಸವನು ಮಾಡುವ
ನೊಳ್ಳಿತಹ ಮಾರ್ಗದಲಿ ನಡೆದು ಮುಮುಕ್ಷುವೆನಿಸದು!

ಮೋಕ್ಷಾಪೇಕ್ಷಿಯಾದವನು ತತ್ವಜ್ಞಾನಿಗಳನ್ನು ತನಗೆ ಬಂದ ಸಂಶಯಗಳ ಬಗ್ಗೆ ಪ್ರಶ್ನಿಸುತ್ತಾನೆ. ವಿವಿಧ ಶಾಸ್ತ್ರಗಳಲ್ಲಿ ಹೇಳಿರುವ ಮುಖ್ಯ ವಿಷಯಗಳನ್ನು ಜ್ಞಾನಿಗಳಿಂದ ಕೇಳಿ ತಿಳಿದುಕೊಳ್ಳುತ್ತಾನೆ. ಸಜ್ಜನ ಸಂತರ ಸಹವಾಸದಲ್ಲಿ ಸದಾ ಇರುತ್ತಾನೆ. ಅವರ ನಡುವಳಿಕೆಗಳನ್ನು ಗಮನಿಸಿ ಅದರಂತೆ ಅನುಸರಿಸಲೆತ್ನಿಸುತ್ತಾನೆ. ಒಳ್ಳೆಯ ಕೆಲಸಗಳ ಕಡೆ ಒಲವನ್ನು ತೋರುತ್ತಾ ತಾತ್ವಿಕ ಸಾತ್ವಿಕ ಸಂಸ್ಕಾರಗಳನ್ನು ಕ್ರಮೇಣ ಅನುಷ್ಠಾನ ಮಾಡಲು ಯತ್ನಿಸುತ್ತಾನೆ. ಹಿರಿಯರು ತೋರಿದ ಶಾಸ್ತ್ರಗಳು ಹೇಳಿದ ಸನ್ಮಾರ್ಗವನ್ನು ಅನುಸರಿಸುತ್ತಾನೆ. ಇಂಥವನು ಮುಮುಕ್ಷು ಎನಿಸುತ್ತಾನೆ.

ಶಂಕರಾಚಾರ್ಯರ ಅದ್ವೈತ ಸಿದ್ಧಾಂತ:

ಬ್ರಹ್ಮಸತ್ಯಂ
ಜಗನ್ಮಿಥ್ಯಾ
ಜೀವೋಬ್ರಹ್ಮೈವನಾಪರಃ

ಈ ಮೂರು ಅದ್ವೈತ ಸಿದ್ಧಾಂತದ ಮೂಲಗಳು. ನಾವು ಪರಮ ಸತ್ಯವೊ, ಈ ಭೂಮಿಯು ಇಲ್ಲ, ತೇಜಸ್ಸು ಇಲ್ಲ, ವಾಯು ಸತ್ಯವೇ ಎಲ್ಲವೂ ಸಾಯುವಂಥವು. ತಾತ್ಕಾಲಿಕವಾಗಿ ಬದುಕಿರುವಂತವರು ನಾವು. ನಕ್ಷತ್ರಗಳಿಗೂ ಸಾವು ಉಂಟು. ನಾವು ಸತುವಲ್ಲ. ಎಲ್ಲ ಕಾಲದಲ್ಲಿಯೂ ಬದುಕಿರುವದಿಲ್ಲ. ಈ ಅದ್ವೈತ ಸಿದ್ಧಾಂತ ಮಹಾಲಿಂಗರಂಗರ ಮೇಲೆ ಪ್ರಭಾವ ಬೀರಿದೆ.

ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕ – ಶ್ರೀ ರಾಮಾನುಜಾಚಾರ್ಯರು

ಸತ್ಯ, ಸೌಶಿಲ್ಯ, ಸೌಂದರ್ಯ – ಗುಣಗಳನ್ನು ದೇವರು ದಯಾಮಯಿ, ಸ್ನೇಹಿತನಂತೆ ಭಾವಿಸಬೇಕು. ನಿರ್ಗುಣ ಬ್ರಹ್ಮದ ತತ್ವಗಳು, ದೇವರಿಗಿರುವ ದೈವೀಗುಣಗಳು. ದೇವರು ಪ್ರೇಮಮೂರ್ತಿ. ಹಿಂದುಳಿದವರನ್ನು ಪ್ರೇಮದಿಂದ ಕಂಡ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಸಿದ್ಧಾಂತ ಮಹಾಲಿಂಗರಂಗರ ಮೇಲೆ ಪ್ರಭಾವ ಬೀರಿ ಅನುಭವಾಮೃತ ಬರೆಯಲು ಪ್ರೇರಣೆ ನೀಡಿತು.

ದ್ವೈತ ಸಿದ್ಧಾಂತ:

ವೇದ, ಉಪನಿಷತ್, ಭಗವದ್ಗೀತೆ ಆಧಾರಿತ ಸಿದ್ಧಾಂತ.

- ತೋರುವ ಜಗತ್ತು ನೀರ ಮೇಲಿನ ಗುಳ್ಳೆಯಂತೆ
- ಸ್ವಪ್ನದಲ್ಲಿ ಕಾಣುವ ವಸ್ತುಗಳಂಎ ಅಶಾಶ್ವತ
- ಶಾಶ್ವತವಾದುದು ಬ್ರಹ್ಮ ಅಥವಾ ಪರಮಾತ್ಮ ಮಾತ್ರ
- ವಿಶ್ವವೇ ಆತನ ಶರೀರದ ಒಂದು ಭಾಗ
- ಜೀವಾತ್ಮನಿಗೆ ಪ್ರತ್ಯೇಕ ಅಸ್ತಿತ್ವವಿಲ್ಲ.

ಕಾರಣ ನಾನೇ ಬ್ರಹ್ಮ 'ಅಹಂಬ್ರಹ್ಮಾಸ್ಮಿ' ಎಂದಿರುವುದು. ಜೀವಾತ್ಮ ಮತ್ತು ಪರಮಾತ್ಮರ ನಡುವೆ ವ್ಯತ್ಯಾಸವಿಲ್ಲ. ಮಧ್ವಾಚಾರ್ಯರು ಈ ದ್ವೈತ ಸಿದ್ಧಾಂತ ಮಹಾಲಿಂಗರಂಗನ ಮೇಲೆ ಪ್ರಭಾವ ಬೀರಿತು.

ಬಸವಣ್ಣನವರ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ:

ಇಷ್ಟಲಿಂಗ, ಶಿವನ ಸಾಕ್ಷತ್ಕಾರಕ್ಕೆ ಕಾರಣ. ಶೂನ್ಯ, ಧಾರ್ಮಿಕ ಆಧ್ಯಾತ್ಮಿಕತೆಯ ಪರಮ ಸಂಕೇತ ಏನೂ ಅಲ್ಲದ್ದು, ಎಲ್ಲವನ್ನೂ ಒಳಗೊಂಡಿದ್ದು. ಯಾವುದೇ ರೂಪ ಹೊಂದಿರದಂಥದ್ದು ಶೂನ್ಯ.

ಒಡಲಿಲ್ಲದ ಬಯಲು, ನಿತ್ಯ ನಿರಂಜನ ನಿರಾಕಾರ ಪರಬ್ರಹ್ಮ ಎಂಬುದನ್ನು ಶಕ್ತಿವಿಶಿಷ್ಟಾದ್ವೈತದಲ್ಲಿ ಹೇಳಿರುವುದು ಮಹಾಲಿಂಗರಂಗನಿಗೆ ಧೋರಣೆ ಆಯಿತು.

ನಿಜಗುಣಶಿವಯೋಗಿಗಳ ಕೈವಲ್ಯ ಪದ್ಧತಿ, ಪರಮಾರ್ಥ ಸಾಧನೆ, ಸರ್ವಭೂಷಣ ಶಿವಯೋಗಿಗಳ ಕೈವಲ್ಯ ವಲ್ಲರಿ, ಕೈವಲ್ಯ ಕನ್ನಡಿ, ಮುಪ್ಪಿನ ಷಡಕ್ಷರಿ ಅನುಭಾವ ನೆಲೆಗಳು. ತತ್ವ ಪದಗಳು, ಅನುಭಾವಗೀತೆಗಳು, ವಚನ, ವಚನೇತರ ಸಾಹಿತ್ಯ, ಸ್ವರಜೊಲ್ಲೆ ಅನುಭಾವ ಗೀತೆಗಳು, ಯೋಗಾಂಗ ತ್ರಿವಿಧಿ, ಮುಡಿಗೆ ಅಷ್ಟಕಗಳು, ಮಂತ್ರಗೋಪ್ಯ ಈ ತರದ ಲಘು ಸಾಹಿತ್ಯಗಳು, ಇವುಗಳ ಪ್ರಭಾವ ಮಹಾಲಿಂಗರಂಗನ ಮೇಲೆ ಬೀರಿದವು.

***

ಅಧ್ಯಾಯ – ೫

ಮಹಾಲಿಂಗರಂಗನ ಮೇಲಾದ ಭಕ್ತಿ ಪಂಥಗಳ ಪ್ರಭಾವ

ಶರಣ ಪಂಥದ ಪ್ರಭಾವ:

ಇಷ್ಟಲಿಂಗ, ಶಿವನ ಸಾಕ್ಷತ್ಕಾರಕ್ಕೆ ಕಾರಣ. ಶೂನ್ಯ, ಧಾರ್ಮಿಕ ಆಧ್ಯಾತ್ಮಿಕತೆಯ ಪರಮ ಸಂಕೇತ ಏನೂ ಅಲ್ಲದ್ದು, ಎಲ್ಲವನ್ನೂ ಒಳಗೊಂಡಿದ್ದು. ಯಾವುದೇ ರೂಪ ಹೊಂದಿರದಂಥದ್ದು ಶೂನ್ಯ.

ಒಡಲಿಲ್ಲದ ಬಯಲು, ನಿತ್ಯ ನಿರಂಜನ ನಿರಾಕಾರ ಪರಬ್ರಹ್ಮ ಎಂಬುದನ್ನು ಬಸವಣ್ಣನವರ ಶಕ್ತಿವಿಶಿಷ್ಟಾದ್ವೈತದಲ್ಲಿ ಹೇಳಿರುವುದು ಮಹಾಲಿಂಗರಂಗನಿಗೆ ಧೋರಣೆ ಆಯಿತು.

ನಿಜಗುಣಶಿವಯೋಗಿಗಳ ಕೈವಲ್ಯ ಪದ್ಧತಿ, ಪರಮಾರ್ಥ ಸಾಧನೆ, ಸರ್ವಭೂಷಣ ಶಿವಯೋಗಿಗಳ ಕೈವಲ್ಯ ವಲ್ಲರಿ, ಕೈವಲ್ಯ ಕನ್ನಡಿ, ಮುಪ್ಪಿನ ಷಡಕ್ಷರಿ ಅನುಭಾವ ನೆಲೆಗಳು. ತತ್ವ ಪದಗಳು, ಅನುಭಾವಗೀತೆಗಳು, ವಚನ, ವಚನೇತರ ಸಾಹಿತ್ಯ, ಸ್ವರಜೊಲ್ಲೆ ಅನುಭಾವ ಗೀತೆಗಳು, ಯೋಗಾಂಗ ತ್ರಿವಿಧಿ, ಮುಡಿಗೆ ಅಷ್ಟಕಗಳು, ಮಂತ್ರಗೋಪ್ಯ ಈ ತರದ ಲಘು ಸಾಹಿತ್ಯಗಳು, ಇವುಗಳ ಪ್ರಭಾವ ಮಹಾಲಿಂಗರಂಗನ ಮೇಲೆ ಬೀರಿದವು.

***

ಅಧ್ಯಾಯ – ೬

ಕನ್ನಡ ಸಾಹಿತ್ಯದಲ್ಲಿ ಮಹಾಲಿಂಗರಂಗನ ಅನುಭವಾಮೃತದ ಮಹತ್ವ

ಕನ್ನಡ ಸಾಹಿತ್ಯಕ್ಕೆ ಹೊಸ ಒಂದು ರೂಪ ಕೊಟ್ಟ ಕೃತಿ. ಕನ್ನಡದ ಕೆಚ್ಚೆದೆಯಿಂದ ಕನ್ನಡದ ಅಭಿಮಾನವನ್ನು ಸಾರಿ ಹೇಳಿದ ಕವಿಗಳ ಸಾಲಿನಲ್ಲಿ ರಂಗನಾಥ ಒಂದು ಗಣ್ಯವಾದ ಸ್ಥಾನವನ್ನು ಪಡೆದಿದ್ದಾನೆ. ಅದ್ವೈತ ಸಿದ್ಧಾಂತವನ್ನು ತಿಳಿಯಾದ ಕನ್ನಡದಲ್ಲಿ ಬೋಧಿಸುವ ಅವನ 'ಅನುಭವಾಮೃತ' ಓದುಬಲ್ಲ ಸಾಮಾನ್ಯ ಜನವರ್ಗದಲ್ಲಿ ಅಷ್ಟೂ ಪ್ರಚುರವಾಗಿರದಿದ್ದರೂ ಮೋಕ್ಷ ಸಂಪಾದನೆಗೆ ಸಂಸ್ಕೃತವನ್ನೇ ಮೊರೆಹೋಗಬೇಕೆ? ಕನ್ನಡ ಸಾಲದೆ? ಎಂಬ ದಿಟ್ಟತನದ ಪ್ರಶ್ನೆ ಹಾಕುವ, ಕನ್ನಡ ನುಡಿಯ ಚೆಲುವನ್ನೂ ಸವಿಯನ್ನೂ ಸುಲಭತೆಯನ್ನು ತಿಳಿಸುವ,

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಇಳಿಸಿದುಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ? ಸಂಸ್ಕೃತದಲಿನ್ನೇನು?

ಎಂಬ ಪದ್ಯವಂತೂ ಒಂದು ಕಾಲದಲ್ಲಿ ಶಾಲೆಯ ವಿದ್ಯಾರ್ಥಿಗಳ ಬಾಯಲ್ಲೂ ನಲಿದಾಡುತ್ತಿತ್ತು. ರಂಗನಾಥನು ಅದ್ವೈತ ಸಿದ್ಧಾಂತದ ಅನುಯಾಯಿ. ಅದ್ವೈತ ಸಿದ್ಧಿಯಿಂದಲೇ ಮೋಕ್ಷ ಎಂಬುದು ಅವನ ವಿಶ್ವಾಸ.

ಪ್ರಸಿದ್ಧವಾದ ಉಪಮಾನಗಳನ್ನೂ, ಗಾದೆ ಮಾತುಗಳನ್ನೂ, ಸಂದರ್ಭೋಚಿತವಾಗಿ ಬಳಸಿಕೊಳ್ಳುವುದು ಮಹಾಲಿಂಗರಂಗನ ಬರವಣಿಗೆಯ ಇನ್ನೊಂದು ವೈಶಿಷ್ಟ್ಯ. ದೃಷ್ಟಾಂತಾಲಂಕಾರಗಳನ್ನು ಮಹಾಲಿಂಗರಂಗ ಅನುಭವಾಮೃತದಲ್ಲಿ ಸೂರೆಗೊಂಡಿದ್ದಾನೆ. ಅನಿರ್ವಚನೀಯವಾದ ಪರಬ್ರಹ್ಮ ಸ್ವರೂಪವನ್ನು ಬಗೆಬಗೆಯ ಉಪಮಾನ ವಾಕ್ಯಗಳಿಂದ ಮಹಾಲಿಂಗರಂಗ ಮನದಟ್ಟಾಗುವಂತೆ ಹೇಳಿದ್ದಾನೆ.

***

ಪರಾಮರ್ಶನ ಗ್ರಂಥಗಳು

೧. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯ (೧೦ ಸಂಪುಟಗಳು), ಪ್ರಧಾನ ಸಂಪಾದಕರು, ಡಾ. ಸಿ. ಬಿ. ಹೊನ್ನು ಸಿದ್ಧಾರ್ಥ, ಸಂಪಾದಕರು ಡಾ. ಮಮತಾ ಗಿರಿರಾಜ.

೨. ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ

೩. ಕನ್ನಡ ಸಾಹಿತ್ಯ ಸಮೀಕ್ಷೆ, ಜಿ. ಎಸ್. ಶಿವರುದ್ರಪ್ಪ

೪. ಪ್ರೌಢದೇವರಾಯನ ಕನ್ನಡ ಸಾಹಿತ್ಯ – ಡಾ. ಶಿವಾನಂದ ವಿರಕ್ತಮಠ

೫. ಮಹಾಯಾತ್ರೆ – ಡಾ. ಆರ್. ಸಿ. ಹಿರೇಮಠ

೬. ವೀರಶೈವ ಸಾಹಿತ್ಯ ಸಮೀಕ್ಷೆ – ಕನವಳ್ಳಿ

೭. ಪ್ರಾಚೀನ ಸಾಹಿತ್ಯದ ರೂಪಗಳು – ರಂ. ಶ್ರೀ. ಮುಗಳಿ

೮. ಬ್ರಹ್ಮಯಾನ – ಮಲ್ಲೇಪುರಂ ಜಿ. ವೆಂಕಟೇಶ

೯. ಹೊಸಕೆರೆ ಚಿದಂಬರಯ್ಯ – ಅನುಭವಾಮೃತದ ಮುನ್ನಡಿ

೧೦. ಟಿ. ಎನ್. ಮಲ್ಲಪ್ಪ – ಶರಣ ಸಾಹಿತ್ಯ

೧೧. ನಿಜಗುಣ ಶಿವಯೋಗಿ – ಕೈವಲ್ಯ ಪದ್ಧತಿ

೧೨. ಎಂ. ಬಿ. ಸೀತಾರಾಮಯ್ಯ – ಸಾಮಾನ್ಯರಿಗೆ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ

೧೩. ಡಿ. ಕೆ. ಭೀಮಸೇನ್‌ರಾವ್ – ಶಬ್ದಮಣಿದರ್ಪಣದ ಪಾಠಾಂತರಗಳು ಮತ್ತು ಅನುಭವಾಮೃತವೂ, ಹರಿಕಥಾಮೃತ ಸಾರವೂ

೧೪. ಉದ್ಧೃತಿಗಳು – ಎಂ. ವಿ. ಸೀತಾರಾಮಯ್ಯ.

೧೫. ಮಧ್ಯಕಾಲೀನ ಭಕ್ತಿ ಚಳುವಳಿಗಳು – ಡಾ. ಎಂ. ನಾಗರಾಜ

ಸಂಶೋಧನಾ ವಿದ್ಯಾರ್ಥಿ **ಮಾರ್ಗದರ್ಶಕರು** **ಮುಖ್ಯಸ್ಥರು, ಕನ್ನಡ ವಿಭಾಗ** **ಡೀನ್**